# ಹಸಿರು ಕಾನನದಲ್ಲಿ ಬೆಳ್ಳಿಗೆರೆ

■ ಸಂಧ್ಯಾ ಭಟ್, ಬನಗೆರೆ
ಚಿತ್ರ: ಗೋಪಾಲ ಬಾರಕೂರ್





ಉತ್ತರ ಕನ್ನಡ ಜಿಲ್ಲೆ ಬನಗೆರೆಯ ಈ ಜಲಪಾತ ಇನ್ನೂ ಹೊರಜಗತ್ತಿಗೆ ಅಪರಿಚಿತವಾಗಿಯೇ ಉಳಿದಿವೆ.

ಶಿರಸಿಯಿಂದ ಹುಲೇಕಲ– ವಾನಳ್ಳಿ ಮಾರ್ಗವಾಗಿ 36 ಕಿ.ಮೀ ಕ್ರಮಿಸಿದರೆ ಸರನಗದ್ದೆ ಎಂಬ ಊರು ಸಿಗುತ್ತದೆ. ಅಲ್ಲಿಂದ ಕೇವಲ 2 ಕಿ.ಮೀ ಸಾಗಿದರೆ ಬನಗರೆ ಎಂಬ ಊರು ಸಿಗುತ್ತದೆ. ಅಲ್ಲಿರುವ ಕೆಲವೇ ಸ್ನೇಹಪರ ನಿವಾಸಿಗಳು ನಿಮಗೆ ಈ ಸುಂದರ ತಾಣದತ್ತ ಹೋಗಲು ಮಾರ್ಗದರ್ಶನ ನೀಡುತ್ತಾರೆ.

ಎತ್ತ ಕಣ್ಣು ಹಾಯಿಸಿದರೂ ದಟ್ಟವಾಗಿ ಹರಡಿರುವ ಸಸ್ಯರಾಶಿಯ ಕಣಿವೆ. ಪಕ್ಕದಲ್ಲೇ ಗಜಮುಖ ಆಕಾರದ ಜಲಪಾತ ನೋಡುಗರಲ್ಲಿ ತನ್ಮಯತೆಯನ್ನು ಮೂಡಿಸುತ್ತದೆ. ಪಶ್ಚಿಮ ಘಟ್ಟದ ವೈವಿಧ್ಯಮಯ ಸಸ್ಯಲೋಕದ ನಡುವೆ ಜಲರಾಶಿಯ ಭೋರ್ಗರೆತ. ಆ ಸೌಂದರ್ಯಕ್ಕೆ ಇಡೀ ಜಗತ್ತೇ ಮರೆತುಹೋಗುವಂತಾಗುತ್ತದೆ. ಇದೇ ಒಂದು ವಿಭಿನ್ನ ಲೋಕ ಎನ್ನಿಸುತ್ತದೆ.

ದಟ್ಟ ಅರಣ್ಯದಲ್ಲಿ ಬಿಳಿಯ ಅಪ್ಸರೆಯಂತೆ ಹುದುಗಿಕೊಂಡಂತೆ ಇರುವ ಈ ಜಲಪಾತದ ಬಳಿಗೆ ಸಾಗುವುದು ಅಷ್ಟು ಸುಲಭವಿಲ್ಲ. ಕಾಡಿನ ನಡುವೆ ಇಳಿಜಾರಿನ ಹಾದಿಯಲ್ಲಿ ಕಷ್ಟಪಟ್ಟು ನಡೆಯಬೇಕು. ಆದರೆ ಬನಗೆರೆ ಗ್ರಾಮದಿಂದ ಕಾಣಿಸುವ ಇದರ ನೋಟವೇ ಮನಸ್ಸಿಗೆ ಸಾಕಷ್ಟು ಮುದ ನೀಡುತ್ತದೆ.

ವರ್ಷದ ಯಾವ ತಿಂಗಳಲ್ಲಿ ಬಂದರೂ ಇಲ್ಲಿ ಸಾಕಷ್ಟು ನೀರು ಇರುತ್ತದೆ. ಆದರೆ ಮಾರ್ಚ್, ಏಪ್ರಿಲ್ ಮತ್ತು ಮೇ ನೀರು ಕಡಿಮೆಯಾಗಿರುತ್ತದೆ. ಜಲಪಾತದ ಜತೆಗೆ ಮಲೆನಾಡಿನ ಈ ಪ್ರಕೃತಿ ಸೌಂದರ್ಯವೂ ಮರೆಲಾಗದ ಅನುಭವ ನೀಡುತ್ತದೆ. ಚಿಕ್ಕ ಹಳ್ಳಿಯಾದ್ದರಿಂದ ಆಹಾರದ ವ್ಯವಸ್ಥೆ ಅಷ್ಟಾಗಿ ಇಲ್ಲ. ನೀವು ಬರುವಾಗಲೇ ಆಹಾರದ ಪೊಟ್ಟಣಗಳನ್ನು ತರುವುದು ಉತ್ತಮ.